

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30-10-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಕಳೆದ ಖುತ್‌ಬದಲ್ಲಿ ಹಝ್ರತ್ ಮುಆಝ್ ಬಿನ್ ಜಬಲ್(ರ)ರ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಮುಆಝ್ ಬಹಳ ಉದಾರಿಯಾಗಿದ್ದರು. ಆದ್ದರಿಂದ ಅನೇಕ ಬಾರಿ ಸಾಲಗಳನ್ನು ಮಾಡಬೇಕಾಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಝ್‌ರ ಎಲ್ಲ ಸೊತ್ತುಗಳನ್ನು ಸಾಲಕೊಟ್ಟವರಿಗೆ ವಿತರಿಸಿದರು. ಆದರೂ ಅವರ ಸಾಲಗಳು ಪೂರ್ಣವಾಗಿ ಸಂದಾಯವಾಗಲಿಲ್ಲ. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಝ್‌ರನ್ನು ಯಮನಿನ ಕಡೆಗೆ ಕಳುಹಿಸುತ್ತಾ ಹೀಗೆ ಹೇಳಿದರು: ಹೇ ಮುಆಝ್, ನಿನಗೆ ತುಂಬ ಸಾಲಗಳಿವೆ. ಯಾರಾದರೂ ಕಾಣಿಕೆಯಾಗಿ ಏನಾದರೂ ಕೊಟ್ಟರೆ, ಅದನ್ನು ನೀನು ಸ್ವೀಕರಿಸು. ನಾನು ನಿನಗೆ ಅದರ ಅನುಮತಿಯನ್ನು ಕೊಡುತ್ತಿದ್ದೇನೆ. ಅದನ್ನು ನೀನು ನಿನ್ನ ಮೇಲೆ ಖರ್ಚು ಮಾಡಬಹುದಾಗಿದೆ.

ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಮುಆಝ್, ಮುಂದಿನ ವರ್ಷ ಬಹುಶಃ ನಿನ್ನ ಭೇಟಿ ನನ್ನೊಡನೆ ಆಗದೇ ಇರಬಹುದು. ಬಹುಶಃ ನೀನು ನನ್ನ ಮಸೀದಿ ಮತ್ತು ನನ್ನ ಗೋರಿಯ ಸಮೀಪದಿಂದ ದಾಟಿ ಹೋಗಲೂಬಹುದು. ಹಝ್ರತ್ ಪೈಗಂಬರ್(ಸ)ರ ವಿಯೋಗದ ಕುರಿತಾದ ಈ ಮಾತುಗಳನ್ನು ಕೇಳಿ ಹಝ್ರತ್ ಮುಆಝ್(ರ) ಜೋರಾಗಿ ಅಳಲು ತೊಡಗಿದರು. ಅನಂತರ ಹಝ್ರತ್ ಪೈಗಂಬರ್(ಸ) ತನ್ನ ದಿಕ್ಕನ್ನು ಬದಲಿಸಿದರು ಮತ್ತು ತನ್ನ ಅನುಗ್ರಹೀತ ಮುಖವನ್ನು ಮದೀನದ ಕಡೆಗೆ ತಿರುಗಿಸಿ ಹೇಳಿದರು: ದೇವಭಕ್ತರಾಗಿರುವವರು ನನ್ನ ಸಮೀಪವಾಗಿರುವರು. ಅವರು ಯಾರೇ ಆದರೂ ಸರಿ ಮತ್ತು ಅವರು ಎಲ್ಲಿಯೇ ಇರುವವರಾದರೂ ಸರಿ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಮುಆಝ್(ರ)ರನ್ನು ಪೀಡಿತನ ಮೊರೆಯಿಂದ ರಕ್ಷಣೆ ಪಡೆಯಲು ವಿಶೇಷವಾಗಿ ಉಪದೇಶಿಸಿದರು. ಏಕೆಂದರೆ, ದೌರ್ಜನ್ಯ ಪೀಡಿತನ ಕೂಗು ಮತ್ತು ಅಲ್ಲಾಹನ ನಡುವೆ ಯಾವುದೇ ತಡೆಯಿರುವುದಿಲ್ಲ.

ಹಝ್ರತ್ ಮುಆಝ್ ಬಿನ್ ಜಬಲ್‌ರನ್ನು ಹಝ್ರತ್ ಪೈಗಂಬರ್(ಸ) ಖಾಝಿಯೆಂಬ ನೆಲೆಯಲ್ಲಿ ಯಮನಿಗೆ ಕಳುಹಿಸಿದರು. ಅವರು ಅಲ್ಲಿಯ ಜನರಿಗೆ ಪವಿತ್ರ ಖುರ್‌ಆನ್ ಮತ್ತು ದೀನನ್ನು ಕಲಿಸುತ್ತಿದ್ದರು ಹಾಗೂ ಅವರ ಮಧ್ಯೆ ತೀರ್ಮಾನಗಳನ್ನು ಮಾಡುತ್ತಿದ್ದರು. ಝಕಾತ್ ವಸೂಲು ಮಾಡುತ್ತಿದ್ದ ಯಮನಿನ ಕಾರ್ಯಕರ್ತರು ಅದನ್ನು ಒಟ್ಟುಗೂಡಿಸಿ ಹಝ್ರತ್ ಮುಆಝ್ ಬಿನ್ ಜಬಲ್‌ರಿಗೆ ಕಳುಹಿಸುತ್ತಿದ್ದರು. ಹಝ್ರತ್ ಮುಆಝ್(ರ) ಯಮನಿನಲ್ಲಿ ಬೈತುಲ್ ಮಾಲಿನ ಹಣದಿಂದ ವ್ಯಾಪಾರ ಮಾಡಿದರು. ಅದರಿಂದ ಲಭಿಸಿದ ಲಾಭದಿಂದ ತನ್ನ ಸಾಲಗಳನ್ನು ತೀರಿಸಿದರು. ಅಲ್ಲಾಹನ ಸಂಪತ್ತಿನಿಂದ, ಎಂದರೆ ಬೈತುಲ್ ಮಾಲಿನ ಹಣದಿಂದ ವ್ಯಾಪಾರ ಮಾಡಿದ ಮೊದಲ ವ್ಯಕ್ತಿ ಹಝ್ರತ್ ಮುಆದ್(ರ) ಆಗಿದ್ದರು. ಹಝ್ರತ್ ಪೈಗಂಬರ್(ಸ)ರ ನಿಧನದ ವರೆಗೆ ಹಝ್ರತ್ ಮುಆಝ್(ರ) ಯಮನಿನಲ್ಲೇ ನೆಲೆಸಿದ್ದರು.

ಹಝ್ರತ್ ಮುಆಝ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನನ್ನನ್ನು ಯಮನಿನ ಕಡೆಗೆ ಕಳುಹಿಸಿದಾಗ ಕೇಳಿದರು: ನಿನ್ನ ಮುಂದೆ ಏನಾದರೂ ವಿಷಯ ಬಂದರೆ, ನೀನು ಹೇಗೆ ತೀರ್ಮಾನವನ್ನು ಮಾಡುವೆ? ನಾನು ಹೇಳಿದೆ: ಅಲ್ಲಾಹನ ಗ್ರಂಥದಿಂದ ತೀರ್ಮಾನ ಮಾಡುವೆನು. ಹಝ್ರತ್ ಪೈಗಂಬರ್(ಸ) ಕೇಳಿದರು: ಅಲ್ಲಾಹನ ಗ್ರಂಥದಲ್ಲಿ ಇದರ ಬಗ್ಗೆ ಯಾವುದೇ ಆಜ್ಞೆಯಿಲ್ಲದಿದ್ದರೆ ಏನು ಮಾಡುತ್ತೀಯಾ? ನಾನು ಹೇಳಿದೆ: ಹಾಗಾದರೆ ನಾನು ಅಲ್ಲಾಹನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುನ್ನತ್ ಪ್ರಕಾರ ತೀರ್ಮಾನ ಮಾಡುವೆನು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನ ರಸೂಲರ ಸುನ್ನತಿನಲ್ಲೂ ಇದರ ಬಗ್ಗೆ ಯಾವುದೇ ಪರಿಹಾರ ಲಭಿಸದಿದ್ದರೆ ಏನು ಮಾಡುತ್ತೀಯಾ? ನಾನು ಹೇಳಿದೆ: ಹಾಗಾದರೆ, ಚೆನ್ನಾಗಿ ಆಲೋಚಿಸಿ ನನ್ನ ಅಭಿಪ್ರಾಯವನ್ನು ಹೇಳುವೆನು. ಅದರಲ್ಲಿ ಯಾವುದೇ ರೀತಿಯ ದೋಷವನ್ನು ಮಾಡಲಾರೆನು. ಆಗ ಹಝ್ರತ್ ಪೈಗಂಬರ್(ಸ) ನನ್ನ ಎದೆಯ ಮೇಲೆ ಕೈಯಿಟ್ಟುಕೊಂಡು ಹೇಳಿದರು: ಅಲ್ಲಾಹನ ರಸೂಲಿನ ದೂತನಿಗೆ ಇಂತಹ ಸಂಗತಿಗಳ ಅರಿವಿನ ಸೌಭಾಗ್ಯವನ್ನು ನೀಡಿರುವ ಅಲ್ಲಾಹನಿಗೆ ಎಲ್ಲ ಸ್ತುತಿಗಳು. ಇದು ಅಲ್ಲಾಹನ ರಸೂಲಿನ ಸಂಪ್ರೀತಿಗೆ ಕಾರಣವಾಗಿದೆ.

ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಝ್‌ರನ್ನು ಯಮನ್ ನಿವಾಸಿಗಳ ಬಳಿಗೆ ಅಧಿಕಾರಿಯನ್ನಾಗಿ ಮಾಡಿ ಕಳುಹಿಸಿದರು. ಯಮನ್ ನಿವಾಸಿಗಳಿಗೆ ಹೀಗೆ ಪತ್ರವನ್ನು ಬರೆದರು: ಖಂಡಿತವಾಗಿಯೂ ನಾನು ನಮ್ಮ ಜನರಲ್ಲಿ ಅತ್ಯುತ್ತಮರಾದ ಒಬ್ಬರನ್ನು ನಿಮ್ಮ ಅಧಿಕಾರಿಯನ್ನಾಗಿ ಮಾಡಿದ್ದೇನೆ. ಅವರು ಅರಿವುಳ್ಳವರೂ ಧರ್ಮಶೀಲರೂ ಆಗಿರುವರು. ಹಝ್ರತ್ ಮುಆಝ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನನಗೆ ಹತ್ತು ಸಂಗತಿಗಳ ಉಪದೇಶಗಳನ್ನು ಮಾಡುತ್ತಾ ಹೇಳಿದರು: ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬೇಡ, ನೀನು ಕೊಲ್ಲಲ್ಪಟ್ಟರೂ ಸರಿ. ಬೆಂಕಿಯಿಂದ ಸುಡಲ್ಪಟ್ಟರೂ ಸರಿ. ತಂದೆ ತಾಯಂದಿರಿಗೆ ಅವಿಧೇಯತೆ

ತೋರಿಸಬೇಡ. ಅವರು ನಿನ್ನನ್ನು ಮನೆ ಮತ್ತು ಸಂಪತ್ತಿನಿಂದ ಬೇರ್ಪಡಿಸಿದರೂ ಸರಿ. ಕಡ್ಡಾಯ ನಮಾಝನ್ನು ತಿಳಿದೂ ಅನುಷ್ಠಿಸದೇ ಇರಬೇಡ, ಯಾಕೆಂದರೆ ಬೇಕಂತಲೇ ಕಡ್ಡಾಯ ನಮಾಝನ್ನು ಉಪೇಕ್ಷಿಸುವವನು ಅಲ್ಲಾಹನ ಸಂರಕ್ಷಣೆಯಿಂದ ಹೊರಗೆ ಹೋಗುತ್ತಾನೆ. ಶರಾಬನ್ನು ಕುಡಿಯಬೇಡ, ಏಕೆಂದರೆ ಸಾರಾಯಿ ಪ್ರತಿಯೊಂದು ಲಜ್ಜಾಹೀನತೆಯ ಬೇರಾಗಿದೆ. ಪಾಪ ಮತ್ತು ಅಜ್ಞೋಲ್ಲಂಘನೆಯಿಂದ ದೂರವಿರು. ಏಕೆಂದರೆ, ಪಾಪವು ಅಲ್ಲಾಹನ ಅಸಂತುಷ್ಟಿಗೆ ಕಾರಣವಾಗುತ್ತದೆ. ಶತ್ರುವಿನೊಡನೆ ಮುಖಾಮುಖಿಯಾದರೆ ಓಡಿಹೋಗಬೇಡ. ಜನರು ಪ್ಲೇಗ್‌ನಂತಹ ಸಾಂಕ್ರಾಮಿಕ ರೋಗಕ್ಕೆ ತುತ್ತಾಗುವ ವೇಳೆ ನೀನು ಅವರ ನಡುವೆ ಇರುವನಾದರೆ, ನಿನ್ನ ಜಾಗದಲ್ಲೇ ಇರು. ನಿನ್ನ ಕುಟುಂಬದ ಮೇಲೆ ನಿನ್ನ ಶಕ್ತಿಯನುಸಾರ ಖರ್ಚುಮಾಡು. ಅವರಿಗೆ ಲಭಿಸಬೇಕಾದ ಹಕ್ಕುಗಳನ್ನು ಪೂರೈಸಿಕೊಡು. ಅವರ ಶಿಕ್ಷಣ ಮತ್ತು ತರಬೇತಿಯಲ್ಲಿ ಯಾವುದೇ ಕೊರತೆ ಉಂಟಾಗದಂತೆ ನೋಡು. ಅವರಿಗೆ ಅಲ್ಲಾಹನ ಮೇಲೆ ಇರಬೇಕಾದ ಭಯಭಕ್ತಿಯ ಬಗ್ಗೆ ನೆನಪಿಸುತ್ತಾ ಇರು. ಈ ಹತ್ತು ಸಂಗತಿಗಳನ್ನು ಹಝ್ರತ್ ಪೈಗಂಬರ್[ಸ] ಅವರಿಗೆ ಹೇಳಿಕೊಟ್ಟರು.

ಹಝ್ರತ್ ಮುಆಧ್‌ರೊಡನೆ ಹಝ್ರತ್ ಪೈಗಂಬರ್[ಸ] ಹೇಳಿದ್ದಾಗಿ ಹಝ್ರತ್ ಇಬ್ನು ಉಮರ್[ರ] ವರದಿ ಮಾಡುತ್ತಾರೆ: ಹೇ ಮುಆಧ್ ನಾನು ನಿನ್ನನ್ನು ಪ್ರೀತಿಯ ಸಹೋದರನ ಹಾಗೆ ಉಪದೇಶಿಸುತ್ತೇನೆ: ಅಲ್ಲಾಹನ ಮೇಲೆ ಭಯಭಕ್ತಿಯನ್ನು ಇರಿಸು. ರೋಗಿಯ ಯೋಗ ಕ್ಷೇಮವನ್ನು ವಿಚಾರಿಸು, ವಿಧವೆಯರ ಮತ್ತು ದುರ್ಬಲರ ಆವಶ್ಯಕತೆಗಳನ್ನು ಪೂರೈಸು, ನಿರ್ಗತಿಕರ ಮತ್ತು ಬಡವರ ಜೊತೆ ಕುಳಿತುಕೊಳ್ಳು, ಜನರಿಗೆ ತನ್ನ ಕಡೆಯಿಂದ ನ್ಯಾಯವನ್ನು ಒದಗಿಸಿಕೊಡು, ಸತ್ಯವನ್ನು ಹೇಳು, ಅಲ್ಲಾಹನ ವಿಷಯದಲ್ಲಿ ಯಾವನೇ ದೂಷಕನ ದೂಷಣೆ ನಿನಗೆ ಅಡ್ಡಿಯಾಗದಿರಲಿ.

ಹಝ್ರತ್ ಮುಆಧ್ ಹಿಜರೀ 9ರಿಂದ 11ರ ತನಕ ಯಮನಿನಲ್ಲಿ ಇದ್ದರು. ಹಝ್ರತ್ ಉಮರ್[ರ] ಹೇಳಿದರು: ನನ್ನ ಮರಣದ ಸಮಯ ಬರುವಾಗ, ಹಝ್ರತ್ ಅಬೂ ಉಬೈದ ಬಿನ್ ಜರಾಹ್[ರ] ನಿಧನರಾಗಿರುವರಾದರೆ, ಹಝ್ರತ್ ಮುಆಧ್ ಬಿನ್ ಜಬಲ್‌ರನ್ನು ಖಲೀಫರನ್ನಾಗಿ ನಿಶ್ಚಯಿಸುವೆನು. ನೀನು ಅವರನ್ನು ಏಕೆ ಖಲೀಫರನ್ನಾಗಿ ಮಾಡಿದೆ ಎಂದು ಅಲ್ಲಾಹನು ನನ್ನೊಡನೆ ಕೇಳಿದರೆ, ನಾನು ಹೀಗೆ ಹೇಳುವೆನು: ಅವರನ್ನು ಖಿಯಾಮತ್ ದಿನದಂದು ಪಂಡಿತರ ಮುಂದೆ ಮುಂದೆ ತರಲಾಗುವುದು ಎಂದು ನಿನ್ನ ಪೈಗಂಬರ್[ಸ] ಹೇಳಿದ್ದಾಗಿ ನಾನು ಕೇಳಿದ್ದೇನೆ.

ಹಝ್ರತ್ ಪೈಗಂಬರ್[ಸ] ಹೇಳಿದ್ದಾಗಿ ಹಝ್ರತ್ ಮುಆಧ್[ರ] ಹೇಳಿದ್ದನ್ನು ಅಬೂ ಇದ್ರೀಸ್ ಖೂಲಾನಿ ವಿವರಿಸುತ್ತಾರೆ: ಅಲ್ಲಾಹನು ಹೇಳುತ್ತಾನೆ: ನನಗಾಗಿ ಪರಸ್ಪರ ಪ್ರೀತಿಸುವವರ, ನನ್ನ ಸಲುವಾಗಿ ಒಟ್ಟಿಗೆ ಕುಳಿತುಕೊಳ್ಳುವವರ, ನನ್ನ ಪರವಾಗಿ ಪರಸ್ಪರ ಭೇಟಿಯಾಗುವವರ, ನನಗಾಗಿ ಪರಸ್ಪರ ಖರ್ಚು ಮಾಡುವವರ ಮೇಲೆ ನನ್ನ ಸಂಪ್ರೀತಿ ಕಡ್ಡಾಯವಾಯಿತು.

ಹಝ್ರತ್ ಅಬೂ ಉಬೈದ[ರ] ಪ್ಲೇಗಿನಿಂದ ನಿಧನರಾದಾಗ, ಹಝ್ರತ್ ಮುಆಧ್‌ರನ್ನು ಹಝ್ರತ್ ಉಮರ್[ರ] ಸಿರಿಯಾದ ಅಧಿಕಾರಿಯನ್ನಾಗಿ ನಿಶ್ಚಯಿಸಿದರು. ಹಝ್ರತ್ ಮುಆಧ್[ರ] ಸಹ ಇದೇ ಪ್ಲೇಗ್ ರೋಗದಿಂದ ಅದೇ ವರ್ಷ ನಿಧನರಾದರು. ಕಸೀರ್ ಬಿನ್ ಮುರ್ರ ವರದಿ ಮಾಡುತ್ತಾರೆ: ಹಝ್ರತ್ ಮುಆಧ್[ರ] ತನ್ನ ರೋಗಾವಸ್ಥೆಯಲ್ಲಿ ನಮ್ಮೊಡನೆ ಹೇಳಿದರು: ನಾನು ಹಝ್ರತ್ ಪೈಗಂಬರರಿಂದ ಒಂದು ಮಾತನ್ನು ಕೇಳಿದ್ದೇನೆ, ಅದನ್ನು ನಾನು ನಿಮ್ಮೊಡನೆ ಹೇಳದೆ ರಹಸ್ಯವಾಗಿ ಇಟ್ಟಿದ್ದೆ. ಹಝ್ರತ್ ಪೈಗಂಬರ್[ಸ] ಹೇಳಿದರು: ಯಾರ ಕೊನೆಯ ಮಾತು **ಲಾ ಇಲಾಹ ಇಲ್ಲಲ್ಲಾಹ್** ಎಂದಾಗಿರುವುದೋ ಅವನಿಗೆ ಸ್ವರ್ಗ ಕಡ್ಡಾಯವಾಯಿತು.

ಹಝ್ರತ್ ಮುಆಧ್ ಬಿನ್ ಜಬಲ್‌ರ ಮರಣದ ಸಮಯ ಸಮೀಪಿಸಿದಾಗ, ಅವರು ಹೇಳಿದರು: ಹೇ ಅಲ್ಲಾಹ್, ನಾನು ನಿನ್ನನ್ನು ಭಯಪಡುತ್ತೇನೆ ಎಂದು ನಿನಗೆ ಗೊತ್ತು, ಆದರೆ ಇಂದು ನಾನು ತುಂಬ ಪ್ರತೀಕ್ಷೆಯಲ್ಲಿದ್ದೇನೆ. ನಾನು ಇಹಲೋಕ ಮತ್ತು ದೀರ್ಘಾಯುಸ್ಸನ್ನು ಇಷ್ಟಪಡುವುದು, ಕಾಲುವೆಗಳನ್ನು ತಯಾರು ಮಾಡಲಿಕ್ಕೂ, ಮರಗಳನ್ನು ನೆಡಲಿಕ್ಕೂ ಅಲ್ಲ. ಬದಲಿಗೆ, ಮಧ್ಯಾಹ್ನದ ಬಾಯಾರಿಕೆ ಮತ್ತು ಪರಿಸ್ಥಿತಿಯ ಕಷ್ಟತೆಗಳನ್ನು ಸಹಿಸಲಿಕ್ಕೂ ಪಂಡಿತರೊಂದಿಗೆ ಕುಳಿತುಕೊಂಡು ನಿನ್ನನ್ನು ಸ್ಮರಿಸಲಿಕ್ಕೂ ಆಗಿದೆ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಮುಆಧ್‌ರಿಗೆ ನಿಧನದ ಸಮಯ ಸನ್ನಿಹಿತವಾದಾಗ, ಅವರು ಅಳಲು ಪ್ರಾರಂಭಿಸಿದರು. ನೀವಂತು ಹಝ್ರತ್ ಪೈಗಂಬರರ ಸಂಗಡಿಗರಾಗಿದ್ದೀರಿ, ನೀವೇಕೆ ಅಳುತ್ತಿದ್ದೀರಿ ಎಂದು ಅವರೊಡನೆ ಕೇಳಲಾಯಿತು. ಅವರು ಹೇಳಿದರು: ನಾನು ಮರಣದ ದುಃಖದಿಂದ ಅಳುತ್ತಿಲ್ಲ, ಇಹಲೋಕವನ್ನು ಬಿಟ್ಟುಹೋಗುತ್ತಿದ್ದೀನೆ ಎಂಬ ದುಃಖದಿಂದಲೂ ಅಳುತ್ತಿಲ್ಲ. ನಾನು ಅಳುವುದೇಕೆಂದರೆ, ಎರಡು ಪಂಗಡಗಳಿರುವುವು. ಒಂದು ಸ್ವರ್ಗವಾಸಿಯರದ್ದು ಮತ್ತೊಂದು ನರಕವಾಸಿಯರದ್ದು. ನಾನು ಯಾವ ಪಂಗಡದವನಾಗಿ ಎಬ್ಬಿಸಲ್ಪಡುವೆನು ಎಂದು ನನಗೆ ತಿಳಿಯದು.

ಹಿಜರೀ 18ರಲ್ಲಿ ಹಝ್ರತ್ ಮುಆಧ್ ಬಿನ್ ಜಬಲ್[ರ] ನಿಧನರಾದರು. ಅವರಿಗೆ 38 ವರ್ಷ ಪ್ರಾಯವಿದ್ದಿತು ಎಂದು ಹೇಳಲಾಗುತ್ತದೆ. 157 ಹದೀಸುಗಳು ಅವರಿಂದ ವರದಿಯಾಗಿವೆ.

ಇನ್ನು ಪ್ರಸ್ತಾಪಿಸುವ ಸಹಾಬಿಯ ಹೆಸರು ಅಬ್ದುಲ್ಲಾಹ್ ಬಿನ್ ಅಮರ್[ರ] ಎಂದಾಗಿದೆ. ಹಝ್ರತ್ ಅಬ್ದುಲ್ಲಾಹ್‌ರ ಸಂಬಂಧ ಅನ್ಸಾರಿನ ಗೋತ್ರವಾದ ಖಝ್ರಜಿನ ಶಾಖೆ ಬನೂ ಸಲ್ಮಾರೊಂದಿಗೆ ಆಗಿತ್ತು. ಅವರು ಜಾಬಿರ್ ಬಿನ್ ಅಬ್ದುಲ್ಲಾಹ್‌ರ ತಂದೆಯಾಗಿದ್ದರು. ಅವರು ಅಖಬದಲ್ಲಿ ನಡೆದ ಎರಡನೇ ಬೈಅತಿನಲ್ಲಿ ಒಳಪಟ್ಟಿದ್ದರು. ಹಝ್ರತ್ ಪೈಗಂಬರ್[ಸ] ನಿಶ್ಚಯಿಸಿದ ಹನ್ನೆರಡು ದೂತರಲ್ಲಿ ಒಬ್ಬರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು ಮತ್ತು ಉಹದ್ ಯುದ್ಧದಲ್ಲಿ ಶಹೀದರಾದರು. ಉಹದ್ ಯುದ್ಧದಲ್ಲಿ ಮುಸ್ಲಿಮರ ಕಡೆಯಿಂದ ಮೊತ್ತ ಮೊದಲು ಶಹೀದರಾದ ವ್ಯಕ್ತಿ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಅಗಿದ್ದರು.

ಉಹದ್ ಯುದ್ಧದ ಸಂದರ್ಭದಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ಯ್ ಬಿನ್ ಸಲೂಲ್ ಮೋಸಮಾಡಿ ಬಂಡಾಯವೆದ್ದಾಗ,

ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ) ಆ ಜನರನ್ನು ಉಪದೇಶಿಸಲು ಪ್ರಯತ್ನಿಸಿದ್ದರು. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ನನ್ನ ತಂದೆಯಾದ ಅಬ್ದುಲ್ಲಾಹ್ ಬಿನ್ ಅಮ್ರ್(ರ) ಮತ್ತು ನನ್ನ ಮಾವ ಉಹದ್ ಯುದ್ಧದಲ್ಲಿ ಶಹೀದ್ ಆದಾಗ, ನನ್ನ ತಾಯಿ, ಇನ್ನೊಂದು ವರದಿಯ ಪ್ರಕಾರ ತಂದೆಯ ಸಹೋದರಿ, ಎಂದರೆ ಹಝ್ರತ್ ಅಮ್ರ್ ಬಿನ್ ಜಮೂಹ್‌ರ ಪತ್ನಿ, ಅವರಿಬ್ಬರನ್ನೂ ಒಂಟೆಯ ಮೇಲೆ ಇರಿಸಿಕೊಂಡು ಮದೀನಕ್ಕೆ ಬರುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಾಗಿ ಘೋಷಣೆ ಮಾಡುವವರು ಹೀಗೆ ಘೋಷಣೆ ಮಾಡಿದರು: ಕೊಲ್ಲಲ್ಪಟ್ಟ ಮುಸ್ಲಿಮರನ್ನು ಅವರು ಕೊಲ್ಲಲ್ಪಟ್ಟ ಸ್ಥಳದಲ್ಲೇ ದಫನ್ ಮಾಡಿರಿ. ಆಗ ಅವರಿಬ್ಬರನ್ನೂ ಮರಳಿ ಕೊಂಡು ಹೋಗಲಾಯಿತು. ಅವರನ್ನು ಅವರು ಹೋರಾಡುತ್ತಿದ್ದ ಸ್ಥಳದಲ್ಲೇ ದಫನ್ ಮಾಡಲಾಯಿತು.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಉಹದ್ ಯುದ್ಧಕ್ಕಾಗಿ ಹೊರಡಲು ಉದ್ದೇಶಿಸಿದಾಗ, ತನ್ನ ಮಗನಾದ ಹಝ್ರತ್ ಜಾಬಿರ್‌ರನ್ನು ಕರೆದು ಹೀಗೆ ಹೇಳಿದರು: ಹೇ ನನ್ನ ಪುತ್ರಾ, ನಾನು ಶಹೀದ್ ಆಗುವವರಲ್ಲಿ ಮೊದಲಿಗನಾಗುವೆನು ಎಂದು ತೋರುತ್ತದೆ. ನಾನು ನನ್ನ ಹಿಂದೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ನನಗೆ ಅತ್ಯಂತ ಪ್ರಿಯನಾದ ನಿನ್ನನ್ನು ಬಿಟ್ಟು ಹೋಗುತ್ತಿದ್ದೇನೆ. ನನಗೆ ಕೆಲವು ಸಾಲಗಳಿವೆ. ನನ್ನ ಈ ಸಾಲಗಳನ್ನು ನನ್ನ ಪರವಾಗಿ ತೀರಿಸು. ನೀನು ನಿನ್ನ ಸಹೋದರಿಯರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ನಾನು ಉಪದೇಶಿಸುತ್ತೇನೆ. ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಮರುದಿನ ಬೆಳಿಗ್ಗೆ ನನ್ನ ತಂದೆ ಎಲ್ಲರಿಗಿಂತ ಮುಂಚೆ ಶಹೀದ್ ಆದರು. ಉಹದ್ ಯುದ್ಧದಲ್ಲಿ ಶಹೀದ್ ಆದವರನ್ನು ದಫನ್ ಮಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಬಂದಾಗ ಹೀಗೆ ಹೇಳಿದರು: ಅವರನ್ನು ಅವರ ಗಾಯಗಳ ಸಮೇತ ಕಫನ್ ಹೊದಿಸಿರಿ. ಏಕೆಂದರೆ ಅವರ ಮೇಲೆ ನಾನು ಸಾಕ್ಷಿಯಾಗಿದ್ದೇನೆ. ಅಲ್ಲಾಹನ ಮಾರ್ಗದಲ್ಲಿ ಗಾಯಗೊಂಡ ಪ್ರತಿಯೊಬ್ಬ ಮುಸ್ಲಿಮನು ಖಿಯಾಮತ್ ದಿನದಂದು ಬರುವಾಗ, ಅವನ ರಕ್ತ ಹರಿಯುತ್ತಿರುವುದು, ಅದರ ಬಣ್ಣ ಕೇಸರಿಯಾಗಿರುವುದು, ಅದರ ಸುವಾಸನೆ ಕಸ್ತೂರಿಯದ್ದಾಗಿರುವುದು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಬ್ದುಲ್ಲಾಹ್ ಬಿನ್ ಅಮ್ರ್(ರ) ಮತ್ತು ಅಮ್ರ್ ಬಿನ್ ಜಮೂಹ್(ರ)ರನ್ನು ಒಂದೇ ಖಬರಿನಲ್ಲಿ ದಫನ್ ಮಾಡಿರಿ. ಏಕೆಂದರೆ, ಅವರ ಎಡೆಯಲ್ಲಿ ಪರಸ್ಪರ ವಿಶ್ವಾಸ ಮತ್ತು ಪ್ರೀತಿಯಿತ್ತು.

ಇದರ ಉಳಿದ ಭಾಗವನ್ನು ಮುಂದಿನ ಬಾರಿ ಪ್ರಸ್ತಾಪಿಸುವೆನು.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 30-10-2020*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon